ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ
(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ)
ಕಂಪನಿ ಕಾರ್ಯಾಲಯ,
ನವನಗರ, ಹಳೇ ಪೂ. ಬೆಂ. ರಸ್ತೆ, ಹುಬ್ಬಳ್ಳಿ-580 025.
Telephone No. : 0836-2223867

HUBLI ELECTRICITY SUPPLY COMPANY LIMITED
(Wholly owned by Govt. of Karnataka undertaking)
Company Office,
Navanagar, Old P. B. Road, Hubballi-580 025.
E-mail ID : gmadmnnhr@hescom.co.in

Corporate Identity Number (CIN) : U31401KA2002SGC030437

ಸಂ.: ಹೆಚ್.ಸಿ.ಓ.-07/ಬಿ32/2016-17

ದಿನಾಂಕ: 16 MAR 2020

# ಸುತ್ತೋಲೆ

**ವಿಷಯ:** ಕೋರೊನಾ ವೈರಸ್(COVID-19) ಹರಡುವಿಕೆ ತಡೆಗಟ್ಟಲು ಮುಂಜಾಗರೂಕತೆಯ ಕ್ರಮ ಕೈಗೊಳ್ಳುವ ಬಗ್ಗೆ

**ಉಲ್ಲೇಖ**
1. ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ: ಡಿಡಿ/ಎಸ್ಎಸ್.ಯು/ಕೋವಿಡ್-19/17/17-19 ದಿನಾಂಕ: 13.03.2020
2. ಕೇಂದ್ರ ಸರ್ಕಾರದ ಆದೇಶ ಸಂಖ್ಯೆ: f.no.c-1304/1/2020 Vig ದಿನಾಂಕ:06.03.2020
3. ಇಂಧನ ಇಲಾಖೆ ಕರ್ನಾಟಕ ಸರ್ಕಾರ ರವರ ಸುತ್ತೋಲೆ ಸಂಖ್ಯೆ:ENERGY/261/VSC/2020-EMC-ENERGY SECRETARIAT ದಿನಾಂಕ: 16.03.2020

*****

ಇತ್ತೀಚಿನ ದಿನಗಳಲ್ಲಿ ಕೊರೊನಾ ವೈರಸ್(COVID-19) ಪ್ರಕರಣಗಳು ಹೆಚ್ಚುತ್ತಿರುವ ಹಿನ್ನಲೆಯಲ್ಲಿ ಹುವಿಸಕಂನಿ ಯ ಅಧಿಕಾರಿ / ನೌಕರರ ಆರೋಗ್ಯದ ಹಿತದೃಷ್ಟಿಯಿಂದ ಕೊರೊನಾ ವೈರಸ್ ಹರಡುವಿಕೆಯನ್ನು ತಡೆಗಟ್ಟಲು ಅನುಸರಿಸಬೇಕಾದ ಈ ಕೆಳಕಂಡ ಮುಂಜಾಗರೂಕತಾ ಕ್ರಮಗಳನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ಈ ಮೂಲಕ ಸೂಚಿಸಿದೆ.

1. ಹುವಿಸಕಂನಿಯ ಕಂಪನಿ ಕಛೇರಿಯಲ್ಲಿ ಬಯೋಮೆಟ್ರಿಕ್ ಉಪಕರಣದಲ್ಲಿ ಹಾಜರಾತಿಯನ್ನು ದಿನಾಂಕ: 31.03.2020 ರ ವರೆಗೆ ಸ್ಥಗಿತಗೊಳಿಸಲಾಗಿದೆ. ಸದರಿ ಅವಧಿಯಲ್ಲಿ, ಸಂಬಂಧಿಸಿದ ಶಾಖಾ ಮುಖ್ಯಸ್ಥರುಗಳು ತಮ್ಮ ಅಧೀನ ಅಧಿಕಾರಿ/ನೌಕರರ ಹಾಜರಾತಿ ಪುಸ್ತಕವನ್ನು ನಿಯಮಾನುಸಾರ ನಿರ್ವಹಿಸುವುದು.
2. ಹುವಿಸಕಂನಿಯ ಕಂಪನಿ ಕಛೇರಿ ಆವರಣ ಮತ್ತು ಶೌಚಾಲಯದ ಕೋಣೆಗಳನ್ನು ಕ್ರಮಬದ್ಧವಾಗಿ,ನಿಯಮಿತವಾಗಿ ಶುಚಿಯಾಗಿರಸತಕ್ಕದ್ದು. ಕಂಪನಿ ಕಛೇರಿಯ ಪ್ರವೇಶ ದ್ವಾರದಲ್ಲಿ Hand Sanitizers / Hand Wash ಗಳನ್ನು ಇಡಲಾಗಿದ್ದು ಉಪಯೋಗಿಸತಕ್ಕದ್ದು ಮತ್ತು ಶೌಚಾಲಯಗಳಲ್ಲಿ ಕಡ್ಡಾಯವಾಗಿ Liquid Hand Wash ಮತ್ತು ಸಾಬೂನುಗಳನ್ನು ಇಡಲಾಗಿದ್ದು ಅವುಗಳನ್ನು ಕ್ರಮಬದ್ಧವಾಗಿ ಉಪಯೋಗಿಸತಕ್ಕದ್ದು.

[ಪು.ತಿ.ನೋ]

3. ಕೊರೊನಾ ವೈರಸ್(COVID-19) ರ ಹರಡುವಿಕೆಯನ್ನು ತಡೆಗಟ್ಟಲು ಎಲ್ಲಾ ಅಧಿಕಾರಿ/ನೌಕರರು ತಮ್ಮ ಶಾಖೆ, ಶಾಖೆಯಲ್ಲಿನ ಟೇಬಲ್, ಕುರ್ಚಿ ಮತ್ತು ಗಣಕ-ಯಂತ್ರಗಳನ್ನು ಆದ್ಯತೆಮೇರೆಗೆ ಸ್ವಚ್ಛತೆಯಿಂದ ಕಾಪಾಡಿಕೊಳ್ಳತಕ್ಕದ್ದು.

4. ಹುವಿಸಕಂನಿ., ಯ ವ್ಯಾಪ್ತಿಯಲ್ಲಿ ಅಧಿಕಾರಿ/ ನೌಕರರುಗಳಿಗೆ ಎಲ್ಲಾ ರೀತಿಯ ಕಾರ್ಯಾಗಾರ (Workshop)ಗಳಿಗೆ ನಿಯೋಜಿಸುವುದನ್ನು ಮುಂದಿನ ಆದೇಶದವರೆಗೆ ನಿಷೇದಿಸಲಾಗಿದೆ.

5. ಕೊರೊನಾ ವೈರಸ್**(COVID-19)** ಸಂಬಂಧಿಸಿದಂತೆ ಮಾಡಬೇಕಾದ **[DO's]** ಮತ್ತು ಮಾಡಬಾರದ**[DONT's]** ಫಲಕಗಳನ್ನು ಸೂಕ್ತ ಸ್ಥಳದಲ್ಲಿ ಪ್ರದರ್ಶಿಸುವುದು.ಈ ಕುರಿತು ಶಾಖೆಯ ಮುಖ್ಯಸ್ಥರು ತಮ್ಮ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳಿಗೆ ಅಗತ್ಯ ತಿಳುವಳಿಕೆ ನೀಡತಕ್ಕದ್ದು.

6. ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಭಾರತ ಸರ್ಕಾರ / ಕರ್ನಾಟಕ ಸರ್ಕಾರ ಕಾಲಕಾಲಕ್ಕೆ ಹೊರಡಿಸುವ ಸುತ್ತೋಲೆ / ನಿರ್ದೇಶಗಳನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು.

ಪ್ರಧಾನ ವ್ಯವಸ್ಥಾಪಕರು 16/3
[ಆಡಳಿತ ಮತ್ತು ಮಾ.ಸಂ.ಅ.]

**ಪ್ರತಿಗಳು:**

1. ಆರ್ಥಿಕ ಸಲಹೆಗಾರರು[ಆಂತರಿ ಪರಿಶೋಧನೆ], ಕಂಪನಿ ಕಾರ್ಯಾಲಯ, ಹು.ವಿ.ಸ.ಕಂ.ನಿ., ಹುಬ್ಬಳ್ಳಿ.
2. ಪ್ರಧಾನ ವ್ಯವಸ್ಥಾಪಕರು[ತಾಂತ್ರಿಕ], ಕಂಪನಿ ಕಾರ್ಯಾಲಯ, ಹು.ವಿ.ಸ.ಕಂ.ನಿ., ಹುಬ್ಬಳ್ಳಿ.
3. ಅಧೀಕ್ಷಕ ಇಂಜಿನೀಯರ್[ವಿದ್ಯುತ್], ಟಿ.&ಪಿ./ ಪಿ.ಎಮ್.ಸಿ./ ಮಾ.ತಂ.& ಎಂ.ಟಿ, ಕಂಪನಿ ಕಾರ್ಯಾಲಯ, ಹು.ವಿ.ಸ.ಕಂ.ನಿ., ಹುಬ್ಬಳ್ಳಿ.
4. ನಿಯಂತ್ರಣಾಧಿಕಾರಿ[ಲೆಕ್ಕಗಳು ಮತ್ತು ಕಂದಾಯ], ಕಂಪನಿ ಕಾರ್ಯಾಲಯ, ಹು.ವಿ.ಸ.ಕಂ.ನಿ., ಹುಬ್ಬಳ್ಳಿ.
5. ವ್ಯವಸ್ಥಾಪಕ ನಿರ್ದೇಶಕರು/ ನಿರ್ದೇಶಕರು [ತಾಂ.], ಹು.ವಿ.ಸ.ಕಂ.ನಿ., ಹುಬ್ಬಳ್ಳಿ ರವರ ಹಿರಿಯ ಆಪ್ತ ಕಾರ್ಯದರ್ಶಿಗಳಿಗೆ.
6. ಎಲ್ಲಾ ಉಪಲೆಕ್ಕನಿಯಂತ್ರಣಾಧಿಕಾರಿಗಳು, ಕಂಪನಿ ಕಛೇರಿ, ಹು.ವಿ.ಸ.ಕಂ.ನಿ., ________
7. ಎಲ್ಲಾ ಕಾರ್ಯನಿರ್ವಾಹಕ ಇಂಜಿನೀಯರ್[ವಿದ್ಯುತ್], ಕಂಪನಿ ಕಛೇರಿ, ಹು.ವಿ.ಸ.ಕಂ.ನಿ., ________
8. ಎಲ್ಲಾ ಲೆಕ್ಕಾಧಿಕಾರಿಗಳು ಕಂಪನಿ ಕಛೇರಿ, ಹು.ವಿ.ಸ.ಕಂ.ನಿ., ________
9. ಮುಖ್ಯ ಆರ್ಥಿಕ ಅಧಿಕಾರಿ, ಹು.ವಿ.ಸ.ಕಂ.ನಿ., ಹುಬ್ಬಳ್ಳಿ ರವರ ಆಪ್ತ ಕಾರ್ಯದರ್ಶಿಗಳಿಗೆ.
10. ಕಛೇರಿ ಪ್ರತಿ/ ಮಹಾ ಕಡತ.